No. of Printed Pages : **2**

# 21BA5C14KN14

## B.A. VI Semester Degree Examination, Sept./Oct. - 2024

## ಐಚ್ಛಿಕ ಕನ್ನಡ

## DSC-14 : ಮಧ್ಯಕಾಲೀನ ಕನ್ನಡ ಸಾಹಿತ್ಯ

## (NEP)

Time : 2 Hours | Maximum Marks : 60

***ಸೂಚನೆ :*** *ಭಾಷೆ ಹಾಗೂ ಬರಹದ ಶುದ್ಧಿಗೆ ಆದ್ಯತೆ ಕೊಡಲಾಗುವುದು.*

### ವಿಭಾಗ – ಎ

**1.** ಈ ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **10x1=10**

(a) ನಂಬಿಯಣ್ಣನ ಪೂರ್ವಜನ್ಮದ ಹೆಸರೇನು ?

(b) ದಾಶರಥಿ ಎಂದರೆ ಯಾರು ?

(c) ದ.ರಾ. ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ ?

(d) ಭಕ್ತಿ ಬಸವಣ್ಣನವರು ಲೇಖನವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?

(e) ಶಿವಭಕ್ತರ ಚರಿತ್ರೆಯೇ ಪ್ರಮುಖವಾಗಿರುವ ಕೃತಿ ಯಾವುದು ?

(f) ಸಂಗೀತ ಕ್ಷೇತ್ರಕ್ಕೆ ಮುಂಡಿಗೆಗಳ ರೂಪದಲ್ಲಿ ಕೊಡುಗೆ ನೀಡಿದವರು ಯಾರು ?

(g) 'ಗಾರುಡಿಗ ಕವಿ' ಎಂಬ ಬಿರುದು ಯಾರಿಗಿದೆ ?

(h) ಅಂತರಂಗದ ಕದವ ತೆರೆದಾಗ ಲೇಖನದ ಕರ್ತೃ ಯಾರು ?

(i) 'ಭಕ್ತ ಕವಿ' ಎಂದು ಯಾರನ್ನು ಕರೆಯುತ್ತಾರೆ ?

(j) ದಾಸರೆಂದರೆ ಪುರಂದರದಾಸರಯ್ಯ ಎಂದು ಪುರಂದರದಾಸರನ್ನು ಹೊಗಳಿದವರು ಯಾರು ?

### ವಿಭಾಗ – ಬಿ

ಕೆಳಗಿನ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿರಿ. **4x5=20**

**2.** ಮದುವೆ ಮಂಟಪದಲ್ಲಿ ವೃದ್ಧನು ಮಾಡಿದ ಅವಾಂತರಗಳಾವುವು ?

**3.** ರಾಮಧಾನ್ಯ ಚರಿತೆಯ ಕಾವ್ಯ ಮಹತ್ವವನ್ನು ಕುರಿತು ಬರೆಯಿರಿ.

**4.** ಉತ್ತರಕುಮಾರನ ಪುಕ್ಕಲುತನವನ್ನು ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ?

**5.** ಬಸವಣ್ಣನವರ ಭಕ್ತಿ ಸ್ವರೂಪವನ್ನು ಕುರಿತು ಬರೆಯಿರಿ.

**6.** ಅಂತರಂಗದ ಕದವ ತೆರೆದಾಗ ಲೇಖನದ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.

**7.** ರತ್ನಾಕರ ಚಿತ್ರಿಸಿದ ಸ್ತ್ರೀಪಾತ್ರಗಳು ಮನುಕುಲದ ಕುರುಹುಗಳು ಎಂಬುದನ್ನು ವಿಮರ್ಶಿಸಿ.

**ವಿಭಾಗ – ಸಿ**

ಕೆಳಗಿನ **ಯಾವುದಾದರೂ ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **3x10=30**

**8.** ಬಸವಣ್ಣನವರ ವಚನಗಳು ಭಕ್ತಿಯ ದ್ಯೋತಕವಾಗಿವೆ ವಿವರಿಸಿ.

**9.** ಭಯಂಕರವಾದ ಸೈನ್ಯವನ್ನು ಕಾಣುತ್ತಲೇ ಉತ್ತರಕುಮಾರನು ಆಡಿದ ಮಾತುಗಳನ್ನು ವರ್ಣಿಸಿರಿ.

**10.** ರಘುನಂದನನು ನರೆದಲೆಗ ವ್ರೀಹಿಗಳ ಜಗಳವನ್ನು ಬಗೆಹರಿಸಿದ ಬಗೆಯನ್ನು ವಿಮರ್ಶಿಸಿ.

**11.** ಮಹಿಳಾ ಮುಖದ ಹಲವು ಆಯಾಮಗಳು ರತ್ನಾಕರನ ಸ್ತ್ರೀಪಾತ್ರಗಳ ಅಧ್ಯಾಯದಲ್ಲಿ ಅಡಕವಾಗಿವೆ ವಿವರಿಸಿ.

**12.** ಶಿವನು ವೃದ್ಧಮಾಹೇಶ್ವರನಾಗಿ ವೇಷ ಧರಿಸಲು ಕಾರಣವೇನು ? ಚರ್ಚಿಸಿ.

**-o0o-**